**Com.O.S.** 180/2024
**PW**-2

**ಸಾಕ್ಷಿಯನ್ನು ದಿನಾಂಕ 29.7.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಸ್.ಎ.ಎಂ ವಕೀಲರಿಂದಃ**

ನಾನು ಈಗ ಎಸ್.ಎಂ.ಇ ಶಾಖೆಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿವಾದಿ ಹೆಸರಿಗೆ 2 ಖಾತೆ ತೆರೆದಿದ್ದೇವೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅದು ಕ್ಯಾಶ್ ಕ್ರೆಡಿಟ್ ಖಾತೆ ಹಾಗೂ ಟರ್ಮ ಲೋನ್ ಖಾತೆ ಇರುತ್ತದೆ. ಪ್ರತಿವಾದಿ ಅರ್ಜಿ ಹಾಕಿದ ದಿನಾಂಕ ನೆನಪಿಲ್ಲ. ಪ್ರತಿವಾದಿಗೆ ದಿನಾಂಕ 12.1.2022 ರಂದು ಸಾಲ ಮಂಜೂರಾಗಿದೆ. ಅದೇ ದಿನದಂದು 2 ಸಾಲಗಳನ್ನು ಮಂಜೂರು ಮಾಡಿದ್ದೇವೆ ಎಂದರೆ ನಿಜ. ದಿನಾಂಕ 4.8.2021 ರಂದು ಪ್ರತಿವಾದಿ ಅನ್‌ಲೈನ್ ನಲ್ಲಿ ಅರ್ಜಿ ಹಾಕಿದ್ದಾರೆ ಎಂದರೆ ನಿಜ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಿದೆ. ದಿನಾಂಕ 26.5.2021 ರಂದು ಈಗ ನನಗೆ ತೋರಿಸಿದಂತೆ ಅವರಿಗೆ ಸಾಲ ಮಂಜೂರು ಮಾಡಲಾಗುವುದಿಲ್ಲ ಎಂದು ಪತ್ರ ಬರೆದಿದ್ದೆವು ಎಂದರೆ ಪತ್ರ ಬರೆದದ್ದು ನಿಜ, ಆದರೆ ದಾಖಲೆ ಸಲ್ಲಿಸಲು ಪತ್ರ ಬರೆದಿದ್ದೇವೆ. ಸದರಿ ದಾಖಲೆಯನ್ನು ನಿಡಿ2 ಎಂದು ಗುರುತಿಸಿದೆ. ನಿಡಿ2 ರಲ್ಲಿನ ದಾಖಲೆಗಳನ್ನು ಪ್ರತಿವಾದಿ ಹಾಜರುಪಡಿಸಿದ ಬಳಿಕವೇ ಮಂಜೂರು ಮಾಡಿರಬಹುದು. ಆದರೆ ನನಗೆ ಗೊತ್ತಿಲ್ಲ. ದಿನಾಂಕ 20.4.2021 ರಂದು ಡಿ.ಐ.ಸಿ ರವರು ಈಗ ನನಗೆ ತೋರಿಸಿದಂತೆ ಪತ್ರ ನೀಡಿದ್ದರು ಎಂದರೆ ನಿಜ. ಸದರಿ ದಾಖಲೆಯನ್ನು ನಿಡಿ3 ಎಂದು ಗುರುತಿಸಿದೆ. ಆನ್‌ಲೈನ್ ಮೂಲಕ ಹಾಗೂ ಪತ್ರ ಮೂಲಕ ಸಾಲ ಮಂಜೂರು ಮಾಡಲು ಪ್ರೆಪೋಸ್ ಬಂದಿದೆ ಎಂದರೆ ನಿಜ. ಪ್ರತಿವಾದಿ ತಮ್ಮ ಖಾತೆಯಿಂದ ಸಾಲದ ಹಣವನ್ನು ದಿನಾಂಕ 31.5.2022 ಹಾಗೂ 10.6.2022 ರಂದು ಪಡೆದುಕೊಂಡಿದ್ದಾರೆ ಎಂದರೆ ನಿಜ. ಸಾಲ

ಮಂಜೂರಾದ 3 ತಿಂಗಳಲ್ಲಿ ಅದನ್ನು ಉಪಯೋಗಿಸದಿದ್ದರೇ ಸಾಲದ ಹಣವನ್ನು ವಾಪಸ್ ಪಡೆಯಬೇಕು ಎಂದರೆ ಸರಿಯಲ್ಲ. 7 ಲಕ್ಷ ಸಾಲದ ಪೈಕಿ ದಿನಾಂಕ 12.1.2022 ರಂದು 5,65,250/- ರೂ. ಪ್ರತಿವಾದಿ ಖಾತೆಗೆ ವರ್ಗಾವಣೆಯಾಗಿದೆ. ದಿನಾಂಕ 26.3.2023 ರಂದು 5,33,571-26 ರೂ. ಬಾಕಿ ಇದೆ. ಪ್ರತಿವಾದಿಯು 7 ಲಕ್ಷ ಟರ್ಮ್ ಲೋನಿನ ಹಣವನ್ನು ಉಪಯೋಗ ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವತ್ತೂ ನಮ್ಮ ಬ್ಯಾಂಕಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಚೆಕ್ ಪುಸ್ತಕ ನೀಡಿರುವ ಬಗ್ಗೆ ದಾಖಲೆ ನೋಡದೇ ಹೇಳಲಾಗುವುದಿಲ್ಲ. ಪ್ರತಿವಾದಿಯು ಕೇವಲ ಪ್ರಾವಿಷನ್ ಸ್ಟೋರ್ಸ ನಡೆಸುತ್ತಿದ್ದರು ಎಂದರೆ ಇರಬಹುದು. ಅವರು ಸಾಲದ ಅರ್ಜಿಯಲ್ಲಿ ತೋರಿಸಿರುವ ಯಾವುದೇ ವ್ಯವಹಾರವನ್ನು ಯಾವತ್ತೂ ಮಾಡಿಲ್ಲ ಎಂದರೆ ಅದು ಅವರಿಗೆ ಮೋಸದಿಂದ ಆಗಿರಬಹುದು. ಯಾರೋ ಮಧ್ಯವರ್ತಿ ಪ್ರತಿವಾದಿಯ ಹೆಸರಿನಲ್ಲಿ ಸಾಲದ ಹಣವನ್ನು ಪಡೆದಿದ್ದರೂ ಸಹ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಲ ಮಂಜೂರು ಮಾಡಲು ಎಷ್ಟು ಸಮಯ ಬೇಕೆಂದರೆ ಅದು ಪ್ರತಿ ಪ್ರಕರಣಕ್ಕೆ ವ್ಯತ್ಯಾಸ ಇರುತ್ತದೆ. ಸಾಲ ಮಂಜೂರು ಮಾಡುವ ಮೊದಲು ಗ್ರಾಹಕರ ಸ್ಥಳ ತನಿಖೆ ಮಾಡುತ್ತೇವೆ ಎಂದರೆ ನಿಜ. ಪ್ರತಿವಾದಿ ದಾವೆಯಲ್ಲಿ ಕೇಳಿರುವಷ್ಟು ಹಣ ಪಾವತಿಸಲು ಬದ್ಧರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು